ಸಾಧ್ಯವಾಗತೊಡಗಿತು. ಕೇಸಿನ ಫೀ ಇಷ್ಟು ಅಂತ ಹೇಳಿ ವಲ್ಲರಿಯೇ ಕಕ್ಷಿದಾರರಿಂದ ವಸೂಲಿ ಮಾಡಿ ಅವನಿಗೆ ಕೊಡಲು ಶುರು ಮಾಡಿದ ಮೇಲೆ ಒಳ್ಳೆ ಆದಾಯವೂ ಬರತೊಡಗಿತು. ತನ್ನ ಸಂಬಳ ಇಂತಿಷ್ಟು ಅಂತ ಹೇಳಿ ನಿಗದಿ ಮಾಡಿಕೊಂಡು ತೆಗೆದುಕೊಳ್ಳುತ್ತಿದ್ದಳು. ಪಬ್ಲಿಕ್ ಪ್ರಾಸಿಕ್ಯೂಟರ್ ಆನಂದ ಹೊಸ ಕಾರು ತೆಗೆದುಕೊಂಡಾಗ ಇನ್ನು ನಿಮಗೆ ಈ ಹಳೇ ಕಾರು ಎಂತಕ್ಕೆ ಬೇಕು, ಸುಮ್ನೆ ಹರಗಣವೇಯಾ ಎಂದು ದಬಾಯಿಸಿ ಹೇಳಿ ಅವನ ಹಳೆಯ ಮಾರುತಿ ಏಟ್ ಹಂಡ್ರೆಡ್ ಪದುಮಣ್ಣನಿಗೆ ಕೊಡಿಸಿದ್ದಳು. ಅದಕ್ಕೊಂದು ರೇಟು ಹೊಂದಿಸಿ ತಿಂಗಳಿಗೆ ಇಷ್ಟು ಕೊಡುತ್ತೇವೆಂದು ಇಎಂಐ ಫಿಕ್ಸು ಮಾಡಿದ್ದಳು. ಬೆಳಗ್ಗೆ ಒಂಬತ್ತಕ್ಕೆ ರೆಡಿಯಾಗಿ ಆಫೀಸಿಗೆ ಬಂದು ಬೀಗ ತೆಗೆದು ಆವತ್ತಿನ ಕೇಸು ಪೇಪರುಗಳನ್ನು ಜೋಡಿಸಿಕೊಂಡು ತನ್ನ ಹಾಗೂ ಪದುಮಣ್ಣನ ಕರಿಕೋಟು ಹಿಡಿದು ಕೊಂಡು ಮನೆಗೆ ಬರುತ್ತಿದ್ದಳು. ಅವಳು ಸರ್ ಎನ್ನುತ್ತಿದ್ದಂತೆ ಪದುಮಣ್ಣ ಬಂದೇ ಎನ್ನುತ್ತ ಒಂದೇ ಹಾರಿಗೆ ಅಂಗಳಕ್ಕೆ ಜಿಗಿಯುತ್ತಿದ್ದ. ಸೂಟುಕೇಸು, ಕೋಟುಗಳನ್ನೆಲ್ಲ ಹಿಂದಿನ ಸೀಟಲ್ಲಿ ಇಟ್ಟು ತಾನು ಸ್ಟೈಲಾಗಿ ಮುಂದಿನ ಸೀಟಲ್ಲಿ ಕೂರುತ್ತಿದ್ದಳು. ಆ ಸಮಯದಲ್ಲೇನಾದರೂ ನಾಗಕ್ಕ ಹೊರಬಂದರೆ, 'ಎಂತಾ ತಿಂಡಿ ಮಾಡಿದ್ರಿ ಅಕ್ಕಾ, ನೀವೆಂತಕ್ಕೆ ದಿನಾ ದೋಸೆ ತಿಂತ್ರಿ? ಉದ್ದಿಗೆ ಮೈಬರ್ತದಂತೆ, ರೊಟ್ಟಿ-ಚಪಾತಿ ಮಾಡ್ರಿ, ಸಂಜೆಮುಂದೆ ವಾಕಿಂಗು ಹೋಗ್ರಿ ಅಕ್ಕಾ ಮೈ ಇಳಿತದೆ' ಎಂದು ಸಲಹೆ ಕೊಡುತ್ತಿದ್ದಳು.

ತೌರುಮನೆಯ ಏಕಮೇವಾದ್ವಿತೀಯ ಕುಲದೀಪಕಿಯಾದ ನಾಗಲಕ್ಷ್ಮಿಗೆ ತನ್ನನ್ನು ಯಾರಾದರೂ ಯಾವುದಾದರೂ ವಿಷಯದಲ್ಲಿ ಮೀರಿಸುತ್ತಾರೆಂದರೆ, ಅಥವಾ ಕಡಿಮೆಯಾಗಿ ಕಾಣುತ್ತಾರೆಂದರೆ ಅದು ಸಹಿಸಿಕೊಳ್ಳುವುದು ಈ ಜನ್ಮದಲ್ಲೇ ಸಾಧ್ಯವಿಲ್ಲದ ಸಂಗತಿ. ಹೀಗೊಂದು ಚೋಟುದ್ದದ ಹುಡುಗಿ ಅದೂ ತನ್ನ ಗಂಡನಿಂದಲೇ ಸಂಬಳ ತೆಗೆದುಕೊಳ್ಳುವ, ಹಾಗೆ ಪಡೆದು ದುಡ್ಡಲ್ಲೇ ಮನೆ ನಡೆಸುವಷ್ಟು ಅನಿವಾರ್ಯತೆ ಇರುವ ಕಾಸಾಬದ್ರ ಅಂತಲೇ ತಾನು ಪರಿಗಣಿಸುವ ಪೋರಿ ತನ್ನನ್ನು ಹೇಗೋ ನೋಡುವ ವಿಚಾರವನ್ನು ಆಕೆ ಬಹಳ ಗಂಭೀರವಾಗಿಯೇ ತೆಗೆದುಕೊಂಡಳು. ಗಂಡನೊಡನೆ ಜಗಳ ಶುರು ಮಾಡಿದಳು. ತನಗೆ ನೆನಪು ಮಾಡಿಕೊಡಲಿಕ್ಕೆ ಆ ಹುಡುಗಿಯಿಂದ ಬಹಳ ಸಹಾಯವಿದೆಯೆಂದು ಪದುಮಣ್ಣ ತಿಳಿಸಿ ಹೇಳಲು ಹೋದ. 'ಹೌದಪ್ಪ ಹೌದು, ನನಗೆ ಅವಮಾನವಾದರೆ ನಿಮಗೆ ಒಳಗೊಳಗೇ ಖುಷಿಯಾಗುವುದಕ್ಕಾಗಿಯೇ ನೀವು ಆ ಕಿಸಬಾಕಿ ಪೋರಿಯನ್ನು ತಲೆ ಮೇಲೆ ಕುಳಸಿಕೊಂಡೀರಿ' ಅಂತ ಕೈಲಿದ್ದ ಚಾ ಪಾತ್ರೆಯನ್ನು ರೊಯ್ಯನೆ ಅಂಗಳಕ್ಕೆ ಎಸೆದಳು. ಹೀಗೆ, ಆಗಾಗ ಬೇರೆ ಬೇರೆ ಪಾತ್ರೆ ಪರಡಿಗಳು ಅವಳ ಸಿಟ್ಟಿನ ಆವೇಶದಿಂದ ಅಂಗಳ ಸೇರುತ್ತಿದ್ದವು. ಆದ್ದರಿಂದಲೇ ಪದುಮಣ್ಣ ದಿನಾ ನಸುಕಿಗೆ ಎದ್ದು ಅಂಗಳ ಗುಡಿಸುವ ನೆಪದಲ್ಲಿ ಹಿಂದಿನ ದಿನ ಅವಳು ಹೊರಗೆ ಎಸೆದಿರಬಹುದಾದ ಸೌಟು, ಪಾತ್ರೆ, ತಾಟು, ಲೋಟಗಳನ್ನು ಹುಡುಕಿ ಒಳಗೆ ತಂದು ಮುಸುರೆ ಪಾತ್ರೆ ಜೊತೆ ಇಟ್ಟುಬಿಡುತ್ತಿದ್ದ. ಅವಳಿಗೆ ಕಾಣುವಂತೆ ಒಳ ತರುವಂತಿರಲಿಲ್ಲ.

'ನಿಮಗೆ ಜೀವಂತ ಹೆಂಡತಿಗಿಂತ ಪಾತ್ರೆಯೇ ಹೆಚ್ಚಾಯ್ತು ನೋಡಿ, ಜೀಂವ ಇಲ್ದೆಗೆದ್ದಿದ್ದಕ್ಕೂ ಎಷ್ಟು ವಗಾತಿ ಮಾಡ್ತ್ರಿ, ಈ ಮನೆಲಿ ನಂಗೊಂದ್ ಕಿಮ್ಮತ್ತಿಲ್ಲ' ಎಂದು ಕೂಗುತ್ತಿದ್ದಳು. ಅಕ್ಕಪಕ್ಕದ ಮನೆಯವರು, 'ವೀರಭದ್ರನ ವೇಷ ಮಾಡೋನ ಮಗಳಲ್ವ, ಅದಕೇ ಅಷ್ಟು ಸಿಟ್ಟು ಬರ್ತದಾರಬಲ, ಎಲ್ಲಾ ಸ್ಟೀಲು ಪಾತ್ರವೂ ಅಂಗಳಕ್ಕೆ ಬಂದು ಬೀಳೂದೇಯ. ಪದುಮಣ್ಣನ ಮನಿಗೋದ್ರೆ ಉಂಬುಕೊಂದು ನೆಟ್ಟಗಿನ ತಾಟು ಸಿಗೂದು ಸುಳ್ಳು. ಎಲ್ಲದೂ ನೆಗ್ಗು ಬಿದ್ದು ಸೊಟ್ಟಗಾಗಿರೂದು' ಎಂದು ಮಾತಾಡಿಕೊಂಡು ನಗುತ್ತಿದ್ದರು. ಇತ್ತೀಚೆಗೆ ಪದುಮಣ್ಣ ಯಾವ ಊರಿಗೆ ಹೋದರೂ ಅಲ್ಲಿನ ಪೇಟೆಬೀದಿಯಲ್ಲಿ ಹೋಗುವಾಗ ಸ್ಟೀಲ್ ಪಾತ್ರೆಯಂಗಡಿ ಕಣ್ಣಿಗೆ ಬಿದ್ದದ್ದೇ ಥಟ್ಟನೆ ನಿಂತು ಬಿಡುತ್ತಿದ್ದ. ಸೀದಾ ಒಳ ಹೋದವನೇ ಚಾ ಕುದಿಸುವ, ಸಾರು ಮಾಡುವ ಬೋಗಣಿಗೆಗಳನ್ನು. ಊಟದ ತಾಟುಗಳನ್ನು, ಗುಂಡಿ ಸೌಟುಗಳನ್ನು ಖರೀದಿಸುತ್ತಿದ್ದ. ಹೀಗೆ ಪದೇಪದೇ ಬರುವ, ಮತ್ತದೇ ಅದೇ ಪಾತ್ರೆಗಳನ್ನು ಖರೀದಿಸುವ ಗಿರಾಕಿಯನ್ನು ಕಂಡು ಅಂಗಡಿಯವರಿಗೆ ಗಲಿಬಿಲಿಯುಂಟಾದರೂ ವ್ಯಾಪಾರವಾಗುತ್ತದೆಯಂತ ಖುಷಿ ಪಡುತ್ತಿದ್ದರು. ಪದುಮಣ್ಣನದು ಮಾತ್ರ ಒಂದೇ ಒಂದು ಉಗ್ರವಾದ, ರಾಜಿಯಾಗದ ಕಂಡೀಶನ್ ಎಂದರೆ